ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**402/2013**

ದಿನಾಂಕ **27.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ.ವಿ.ಎಸ್. ವಕೀಲರಿಂದಃ

11. ದಾವಾ ಸ್ವತ್ತಿನ ಸ.ನಂ.47 ರ ಪಹಣಿ ಪತ್ರಿಕೆ ಈಗಲೂ ವಾದಿ ಮತ್ತು ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ನಿಡಿ-11 ದಾಖಲೆಯಂತೆ ನನ್ನ ತಂದೆ 5 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಟ್ಟ ಕ್ರಯದ ಪತ್ರಕ್ಕೆ ನಾವೆಲ್ಲಾ ಸಹಿ ಮಾಡಿದ್ದೇವೆ . 5 ನೇ ಪ್ರತಿವಾದಿಗೆ ನನ್ನ ತಂದೆ ಕುಟುಂಬದ ಯಜಮಾನನಾಗಿ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಡಿ-12 ರ ಪಂಚಾಯ್ತಿ ಪಾರಿಕತ್ತಿನ ಪ್ರಕಾರ ಖಾತೆ ಪಹಣಿಗಳು ಆಗಿರುವುದಿಲ್ಲ. ದಿ.09.10.2010 ರ ನಿಡಿ-14 ರ ವಿಲ್ ಪ್ರಕಾರ ಖಾತೆ ಪಹಣಿ ಆಗಿರುವುದಿಲ್ಲ, ಅದರೆ ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಾಯಿ ಹೆಸರಿಗಿರುವ ಸ್ವತ್ತು ಎಲ್ಲಾ ಮಕ್ಕಳ ಹೆಸರಿಗೆ ಆಗಿದೆ, ನನ್ನ ತಂದೆಯ ಹೆಸರಿನಲ್ಲಿರುವ ಸ್ವತ್ತಿಗೆ ನನ್ನ ತಂದೆಗೆ ರೂ.1,00,000/- ಹಣ ಕೊಟ್ಟು ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ.

12. ನಿಡಿ-13 ರ ಅಪೀಲು ಎ ಸಿ ನ್ಯಾಯಾಲಯದಲ್ಲಿ ಈಗ ವಜಾಗೊಂಡಿದೆ. ನಿಡಿ-15 ರಂತೆ ನಾನು ಮತ್ತು ನನ್ನ ತಮ್ಮ ಶ್ರೀರಾಮುಲು 6 ನೇ ಪ್ರತಿವಾದಿಗೆ ಸ್ವತ್ತು ಮಾರಾಟ ಮಾಡಿದ್ದೇವೆ ಎಂದರೆ ಸರಿ. 1 ನೇ ವಾದಿ ಯಾವುದೇ ಪತ್ರವನ್ನು 6 ನೇ ಪ್ರತಿವಾದಿ ಹೆಸರಿಗೆ ಬರೆದುಕೊಟ್ಟಿಲ್ಲ, ನಿಡಿ-16 ನ್ನು ನಾವೇ ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ದಿ.20.12.20006 ರಂದು ನಿಡಿ-18 ರ ಪ್ರಕಾರ ಹಕ್ಕು ಬಿಡುಗಡೆ ಪತ್ರವನ್ನು 1 ನೇ ವಾದಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-18 ನ್ನು ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

13. 2 ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ಅಂದರೆ ನನ್ನ ಹೆಸರಿಗೆ ಮತ್ತು ನನ್ನ ತಮ್ಮ ಶ್ರೀರಾಮುಲು ಹೆಸರಿಗೆ ನಿಡಿ-18 ನ್ನು ಬರೆದುಕೊಟ್ಟಿದ್ದಾರೆ. ದಾಸಣ್ಣನ ಮಗ ಶ್ರೀನಿವಾಸ ರೆಡ್ಡಿ ಎಂಬುವವರು ನನ್ನ ತಂದೆಗೆ ಮಗ ಇಲ್ಲ ಆದರೆ ಶ್ರೀನಿವಾಸ್ ಎಂದು ನಾನು ಒಬ್ಬನೆ ಇದ್ದೇನೆ. ನಿಡಿ-18 ರಲ್ಲಿ ದಾಸಣ್ಣನ ಮಗ ಶ್ರೀನಿವಾಸ ರೆಡ್ಡಿ ಎನ್ನುವವರು ಪತ್ರ ಖರೀದಿ ಮಾಡಿದ ಹಾಗೆ ಇದೆ ಎಂದರೆ ಸರಿ. ನಿಡಿ-18 ನೊಂದಣಿ ಆಗಿಲ್ಲ ಎಂದರೆ ಆಗಿದೆ. ನಿಡಿ-18 ನ್ನು ಯಾವ ಆಸ್ತಿಗಳಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-18 ರಲ್ಲಿ ಬರೆದ ಸರ್ವೆ ನಂಬರ್ ಸ್ವತ್ತುಗಳು ನನ್ನ ತಂದೆಗೆ ಇದ್ದವು.

14. ನಿಡಿ-4 ಮತ್ತು 5 ಕ್ರಯ ಪತ್ರಗಳು ದಾವೆ ಸಲ್ಲಿಸಿದ ನಂತರ ನೊಂದಣಿ ಆದ ಕ್ರಯಪತ್ರಗಳು ಎಂದರೆ ಸುಳ್ಳು. ಸದರಿ ಕ್ರಯಪತ್ರಗಳಿಗೆ 1 ನೇ ವಾದಿ ಸಹಿ ಮಾಡಿದ್ದಾರೆ. ನಿಡಿ-4, 5 ಕ್ಕೆ ವಾದಿಗಳು ಸಹಿ ಮಾಡಿಲ್ಲ, ಆಗ ನಾನು ಸದರಿ ಪತ್ರಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ದಿ.04.02.2007 ರಂದು ಆದ ಪಂಚಾಯ್ತಿ ಪಾರಿಕತ್ತನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆ 1 ನೇ ವಾದಿ, ನನ್ನ ಮತ್ತು ನನ್ನ ತಮ್ಮ ಶ್ರೀರಾಮುಲು ನಡುವೆ ಆಗಿರುತ್ತದೆ. ದಿ.04.02.2007 ರ ಪಂಚಾಯ್ತಿ ಪಾರಿಕತ್ತಿನ ಪ್ರಕಾರ ಖಾತೆ ಪಹಣಿಗಳು ಆಗಿರುವುದಿಲ್ಲ.

15. 4 ನೇ ಪ್ರತಿವಾದಿ ಹಿಂದೂಪುರದಲ್ಲಿ ಯಾವೆಲ್ಲಾ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಮದುವೆ 2000 ಇಸವಿಯ ನಂತರ ಆಗಿರುತ್ತದೆ. ದಿ.12.10.2010 ರ ವಿಲ್ ಪ್ರಕಾರ ಖಾತೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಈವತ್ತಿನವರೆಗೂ ವಿಭಾಗಗಳು ಆಗಿಲ್ಲ ಹಾಗೂ ಅವು ಜಂಟಿ ಕುಟುಂಬದ ಆಸ್ತಿಗಳು ಎಂರದೆ ನನ್ನ ತಂದೆ ನಮ್ಮ ಹೆಸರಿಗೆ ವಿಲ್ ಬರೆದಿದ್ದಾರೆ. ಸದರಿ ವಿಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ . ಹೇ. ಕೇ. ಸರಿ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ